## ಇಸ್ತಿಹಾರ್‌ನಾಮೆ.

ತಾರೀಖು 10ನೆ ಮೇ 1907, ಹಾಸನ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ಕಂಡ ಡಿಪೋಗಳಲ್ಲಿ, ಫಾರೆಸ್ಟು ಪಸಾರೆ ಬಾಬುಗಳನ್ನು ಸದರಿ ಡಿಪೋಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಖಹಿರಂಗವಾಗಿ ಹಾಸನದ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ :—

| ನಂಬರ್. | ಡಿಪೋ ಹೆಸರು. | ಹರಾಜು ತಾರೀಖು. | ಜಿನಸಿ ವಿವರ. | ಮೊತ್ತ. | ಷರಾ. |
|---|---|---|---|---|---|
| 1 | ಅರಕೀಕೆರೆ .. | 10—6—07 | ಅಳಲೇಕಾಯಿ ... | ಮಣ. 2,000 | ಹೆಚ್ಚು ಕಡಮೆ |
| 2 | ಹಾಸನ .. | 12—6—07 | ಡಿಟೋ .. | 500 | ಡಿಟೋ |
| | | | ಯಾಲಕ್ಕಿ .. | 2½ | ಡಿಟೋ |
| | | | ಮರಬೆಣ್ಣೆ .. | ½ | ಡಿಟೋ |
| 3 | ಅರ್ಕಲ್‌ಗೂಡು ... | 15—6—07 | ಅಳಲೇಕಾಯಿ ... | 180 | ಡಿಟೋ |
| | | | ತಂಗಡಿಬಿಚಕ್ಕೆ .. | 2 | ಡಿಟೋ |

### ಹರಾಜು ಷರತ್ತುಗಳು.

1. ಛಡೆ ದರಖಾಸ್ತುದಾರನು ಹರಾಜು ಖೈದಾದ ವಡನೆ ಹರಾಜು ಮೊಬಲಗು ಪೈಕಿ ಕೇಕಡೆ 25ರಂತೆ ಆಗುವ ಮೊಬಲಗನ್ನು ಹತ್ತರವಿರುವ ಖಜಾನೆಗೆ ಕಟ್ಟಿ ಸದರೀ ಟ್ರೆಜರಿ ರಸೀತಿಯನ್ನು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಲ್ಲಿ ಹಾಜರ್ ಮಾಡಬೇಕು; ತಪ್ಪಿದಲ್ಲಿ ಮೂಲನ್ನು ದುಸರೇ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ. ಪರಂತು ಫಾಯಿದೆ ಆದಲ್ಲಿ ಅದರಲ್ಲಿ ಅವನಿಗೆ ಹಕ್ಕು ವೆಂಟಾಗಲಾರದು.

2. ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು (15) ಹದಿನೈದು ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟಿರುವ ಡಿಪಾಜಿಟ್ಟು ಮೊಬಲಗು ಸರ್ಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುತ್ತೆ. ಮತ್ತು ಬಾಬನ್ನು ಒಂದೇ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರೆ ಹರಾಜು ಮಾಡಲ್ಪಡುತ್ತೆ.

3. ತಾನು ಹರಾಜಿನಲ್ಲಿ ಪಡದಿರುವ ಬಾಬಿನ ಕಿಮ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಬಾಬನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮೂಲನ್ನು ರಫ್ತು ಮಾಡಕೂಡದು.

4. ಹರಾಜು ತಾರೀಖು ಲಾಗಾಯಿತು (30) ಮೂವತ್ತು ದಿವಸಗಳ ಮೇಲ್ಪಟ್ಟು ಬಾಬುಗಳನ್ನು ಡಿಪೋದಿಂದ ಸಾಗಿಸದೇ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಮಣ ಒಂದಕ್ಕೆ ತಿಂಗಳು ಒಂದಕ್ಕೆ ಆರು ಪೈ ವೇರೆ ಡಿಪೋ ಬಾಡಿಗೆ ವಸೂಲ್ ಮಾಡಲ್ಪಡುತ್ತೆ. ಮೂಲ್ ಸಂರಕ್ಷಣೆಗೆ ಸರ್ಕಾರದವರು ನ್ಯಾಯವಾದ ವಿರ್ಪಾಡನ್ನು ಮೇಲ್ಕಂಡ ವಾಯಿದೆ ಕಳದ ನಂತರವು ಮಾಡಿಯು; ಮೂಲು ವಹಿಸಿಕೊಳ್ಳುವಾಗ ಅದು ಯಾವ ಸ್ಥಿತೀಲಿ ಇರುತ್ತೋ ಆ ಸ್ಥಿತೀಲಿ ಅದನ್ನು ವಹಿಸಿಕೊಳ್ಳುವದು ಹರಾಜುದಾರನ ಕರ್ತವ್ಯವಾಗಿರುತ್ತೆ.

ಬಿ. ಐ. ಶ್ಯಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನ ಡಿಸ್ಟ್ರಿಕ್ಟ್.

---

## ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 27ನೆ ಏಪ್ರಿಲ್ 1907.

ದೇವನಹಳ್ಳಿ ತಾಲ್ಲೂಕು ಕುಂದಾಣದ ಹೋಬಳಿಗೆ ಸೇರಿದ ಜೋಡಿ ಹೆಗ್ಗನಹಳ್ಳಿ ಎಂಬ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಜೂನ್ ಮಾಹೆ 10ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಮೇ ಮಾಹೆ 9ನೆ ಮಂಗಳವಾರ 19ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 176ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 27ನೆ ಏಪ್ರಿಲ್ 1907.

ಕುಂದಾಣದ ಹೋಬಳಿಗೆ ಸೇರಿದ ಜೋಡಿ ಹೆಗ್ಗನಹಳ್ಳಿ ಎಂಬ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ದೇವನಹಳ್ಳಿ ತಾಲ್ಲೂಕು ಕಛೇರಿಯಲ್ಲಿ 1907ನೆ ಇಸವಿ ಜೂನ್ ಮಾಹೆ 10ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಮೇ ಮಾಹೆ 9ನೆ ಮಂಗಳವಾರ 19ನೆ ನಂಬರ್ ಮೈಸೂರ ಗೆಜೆಟ್ಟಿನ IIನೆ ಭಾಗದ 180ನೆ ನಂಬರ್ ಪೇಜು ನೋಡತಕ್ಕದ್ದು.